300 ಲಕ್ಷ ಅಂದರೆ, ಆರು ಕೋಟಿ ಕೊಟ್ಟಿದ್ದರೆ ನಾಲ್ಕು ಕೋಟಿ ಸಲುವಾಗಿ ಪ್ರಸ್ತಾವನೆಯನ್ನು ನಾವು ಇಟ್ಟುಕೊಂಡಿದ್ದೇವೆ, ಪ್ರಸ್ತಾವನೆ ಅನುಮೋದನೆ ಆಗಬೇಕಾಗಿದೆ. ಆದ ತಕ್ಷಣ ಹೆಚ್ಚಿನ ಆದ್ಯತೆ ಮೇಲೆ ನಾವು ಕೆಲಸಕಾರ್ಯಗಳನ್ನು ಮಾಡುತ್ತೇವೆ.

THE DEVELOPMENT OF TALUK STADIUM BELTHANAGADY

STARRED QUESTION NO	**: 39 (349)**
NAME OF THE MEMBER	**: SHRI VASANTHABANGERA.K (BELTHANAGADY)**
REPLY BY	**: SHRI GULIHATTL D. SHEKAR (HON'BLE MINISTER FOR TEXTILE, YOUTH SERVICE & SPORTS)**

a) What is the quantum of grant sanctioned for the development of Taluk Stadium, Belthangady, so far?

Grants have been sanctioned for the development of taluk Stadium, Belthangady, Dakshina Kannada District, from the following sources, as detailed hereunder.

State Sector	-Rs.3.00 lakhs
Z P Sector	-Rs.22.86 lakhs
12th Finance Commission Grants	-Rs.44.82 lakhs
Total	Rs.70.68 lakhs

B) What is the current status of the construction work?

Construction of pavilion building is at Plinth level and the work is under progress. Ground levelling is done. Laying of 200 M track and construction of courts for other sports disciplines have to be completed.

C) When will the grants required for completion of the remaining

items work be sanctioned?

An amount of Rs.22.45 lakhs has been sanctioned vide Govt. order No. YuSeE/239/YuSeKri/2008 dated 02-02-2009 towards tender premium and additional work slip items of work of Taluk Stadium, Belthangady, Dakshina Kannada District.

This amount will be released during 2009-10 out of the 12th Finance Commission grants.

SUPPLEMENTARY NOTE

Construction of Taluk Stadium, Belthangady, Dakshina Kannada district was accorded administrative approval vide G.O. No. VapraYu 32 YuseKri 95, dated: 17.03.1995 at a cost of Rs. 23.05 lakhs and the work is executed by the Engineering Division of the Zilla Panchayat. The construction of this stadium could not be completed due to paucity of funds. However, as part of the 12th Finance Commission projects, administrative approval has been accorded to the revised estimate for Rs. 44.82 lakhs, for completion of Taluk Stadium, Beltangady vide G.O No. YuseE 12 YuseKri 2007, dated: 16.01.2007. The grant of Rs. 44.82 lakhs has been released in full to the Taluk Stadium Committee (The final instalement of Rs.10.97 lakhs was relesed on 07.02.2009). Construction of pavilion building, Laying of 200 M Track, retaining wall, drainage, ground leveling, chain link Fencing are being taken up utilizing the 12th Finance Commission grants.Construction of Pavilion building is under progress and laying of atheletic track and construction of courts for other sports disciplines have to be completed.

Government has accorded administrative approval for an Amount of Rs. 22.45 lakhs towards tender premium and Additional work slip items of work of Taluk Stadium,Belthangady,Dakshina Kannada District. This amount will be released during the year 2009-2010 out of the 12th Finance Commission grants.

ಅಧ್ಯಕ್ಷರು: ಮುಂದೆ ಮಾನ್ಯ ವಸಂತ ಬಂಗೇರರವರು ಪ್ರಶ್ನೆಯನ್ನು ಕೇಳಬಹುದು. ಮಾನ್ಯ ಸುಭಾಷ್ ಗುತ್ತೇದಾರ್‌ರವರೇ, ತಮ್ಮ ಪ್ರಶ್ನೆ ಲೋಕೋಪಯೋಗಿ ಇಲಾಖೆಗೆ ವರ್ಗಾವಣೆಯಾಗಿದೆ. ಮುಂದಿನ ವಾರದಲ್ಲಿ ನಿಮಗೆ ಉತ್ತರ ದೊರೆಯುತ್ತದೆ.

ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ): ಸನ್ಮಾನ್ಯ ಅಧ್ಯಕ್ಷರೆ, ಒಟ್ಟು ಅನುದಾನ 70.68 ಲಕ್ಷ ರೂಪಾಯಿಗಳು. ಕಾಮಗಾರಿ ಪ್ರಗತಿಯಲ್ಲಿದೆ. 200 ಮೀ. ಟ್ರಾಕ್ ಅಂಕಣ ಮತ್ತು ಇತರೆ ಕ್ರೀಡಾ ಅಂಕಣಗಳನ್ನು ಪೂರ್ಣಗೊಳಿಸಬೇಕಾಗಿರುತ್ತದೆ. 02-02-2009ರಂದು 22.45 ಲಕ್ಷ ರೂಪಾಯಿಗಳನ್ನು ಈಗಾಗಲೇ ಮಂಜೂರು ಮಾಡಲಾಗಿರುತ್ತದೆ. ಈ ಮೊತ್ತವನ್ನು 2009-10ನೇ ಸಾಲಿನಲ್ಲಿ 12 ನೇ ಹಣಕಾಸು ಆಯೋಗದ ಅನುದಾನದಿಂದ ಬಿಡುಗಡೆ ಮಾಡಲಾಗುವುದು ಎಂದು ಹೇಳಿದ್ದೀರಿ. ಆದರೆ, ಹಣ ಇನ್ನೂ ಬಿಡುಗಡೆಯಾಗಿಲ್ಲ. ಹಣದ ಕೊರತೆಯಿಂದ ಕಾಮಗಾರಿ ಪೂರ್ತಿಯಾಗಿಲ್ಲ. ಮಂದಗತಿಯಿಂದ ಸಾಗುತ್ತಿದೆ. ಹೆಚ್ಚಿನ ಕಾಂಗ್ರೆಸ್ ಶಾಸಕರ ಕ್ಷೇತ್ರಗಳಿಗೆ ಹಣ ಬಿಡುಗಡೆಯಾಗುವುದಿಲ್ಲ. ಭಾರಿ ವಿಳಂಬವಾಗುತ್ತಿದೆ. ಯಾವಾಗ ಹಣ ಬಿಡುಗಡೆ ಮಾಡುತ್ತೀರಿ? ಎಷ್ಟು ಸಮಯಾವಕಾಶ ಬೇಕು ಎಂದು ದಯವಿಟ್ಟು ತಿಳಿಸಿ?

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಜವಳಿ, ಯುವಜನ ಸೇವೆ ಮತ್ತು ಕ್ರೀಡಾ ಸಚಿವರು): ಮಾನ್ಯ ಸಭಾಧ್ಯಕ್ಷರೇ,ಈಗಾಗಲೇ 22 ಲಕ್ಷ 45 ಸಾವಿರಗಳನ್ನು administrative ಗೆ approval ಗೆ ಫೆಬ್ರವರಿಯಲ್ಲಿ ಕೊಟ್ಟಿದ್ದೇವೆ. ಇದನ್ನು 2009-10ನೇ ಸಾಲಿನಲ್ಲಿ ನಾವು ಸಧ್ಯದಲ್ಲೇ ಬಿಡುಗಡೆ ಮಾಡುತ್ತೇವೆ.

ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ): ಸಧ್ಯದಲ್ಲೇ ಎಂದು ಹೇಳಿದ್ದೀರಿ. ಯಾವಾಗ ಎಂದು ನಿರ್ದಿಷ್ಟವಾಗಿ ಹೇಳಿದರೆ ಒಳ್ಳೆಯದು.

ಅಧ್ಯಕ್ಷರು: Specific ಆಗಿ ಹೇಳಬೇಕು.

(ಗೊಂದಲ)

ಅಧ್ಯಕ್ಷರು: No I will not allow. ಮಾನ್ಯ ದಿನೇಶ್‌ರವರೇ, No I will not allow. ಇನ್ನೂ ಮೂರು-ನಾಲ್ಕು ಪ್ರಶ್ನೆಗಳಿವೆ. ಬೆಳ್ತಂಗಡಿ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಅವರು ಕೇಳಲಿ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಕ್ರೀಡಾಂಗಣದ ನಿರ್ಮಾಣವಾಗುತ್ತಿಲ್ಲ. ಅದರ ಬಗ್ಗೆ ನಾನು ಹೇಳುತ್ತೇನೆ. ಅವರು ಸಧ್ಯದಲ್ಲೇ ಎಂದು ಹೇಳಿದ್ದಾರೆ.

ಅಧ್ಯಕ್ಷರು: question hour ಮುಗಿಯುತ್ತಾ ಬಂದಿದೆ. ನಾನು ಉಳಿದ ಪ್ರಶ್ನೆಗಳನ್ನು held over ಮಾಡುತ್ತೇನೆ. ಬೆಳ್ತಂಗಡಿ ವಿಷಯದ ಬಗ್ಗೆ ನಿಮಗೆ ನಾನು allow ಮಾಡುವುದಿಲ್ಲ.

ಶ್ರೀ ದಿನೇಶ್ ಗುಂಡುರಾವ್: ಐದು ನಿಮಿಷವಷ್ಟೆ. ಅವರು ಕೇಳಿದ ಮೇಲೆ ಮತ್ತೆ ಇನ್ನೊಂದು ಸಲ ಕೇಳುತ್ತೇನೆ.

(ಗೊಂದಲ)

ಅಧ್ಯಕ್ಷರು: ನೋಡಿ ನಾನು ನಿಮಗೆ ಬೆಳ್ತಂಗಡಿ ವಿಷಯಕ್ಕೆ allow ಮಾಡುವುದಿಲ್ಲ. ಮಾನ್ಯ ಬಂಗೇರರವರೇ ನೀವು ಕೇಳಿ. ತಾವು ಬೇರೆ ಪ್ರಶ್ನೆ ಕೇಳಿ. ಮುಂದಿನ question ತೆಗೆದುಕೊಳ್ಳೋಣ. ಮಾನ್ಯ ಸುನಿಲ್ ಹೆಗಡೆಯವರು ಕೇಳಿ. ಈಗ ಮಾನ್ಯ ಬಂಗೇರರವರೇ ನೀವು ಕೇಳಿ.

ಶ್ರೀ ವಂಸತ ಬಂಗೇರ ಕೆ. (ಬೆಳ್ತಂಗಡಿ): ಕಳೆದ ಬಾರಿ ನಾನು ಶಾಸಕನಾಗಿದ್ದಾಗ ಈ ಕಾಮಗಾರಿ ಮಂಜೂರಾಗಿತ್ತು. ಸುಮಾರು 12 ವರ್ಷಗಳ ಕಾಲವಾಯಿತು. 12 ವರ್ಷಗಳಲ್ಲಿ ಈ ಕಾಮಗಾರಿ ಪೂರ್ತಿಯಾಗಿಲ್ಲ. ಅದು ಗುತ್ತಿಗೆದಾರರ ಬದಲಾವಣೆಯಿಂದ ಪೂರ್ತಿ ಆಗಿಲ್ಲವೇ ಅಥವಾ ಹಣ ಒದಗಿಸದೆ ಪೂರ್ತಿ ಆಗಿಲ್ಲವೇ? ಈಗ ನೀವು ಸಧ್ಯದಲ್ಲಿ ಎಂದು ಹೇಳಿದಿರಿ. ಖಚಿತವಾಗಿ ಇಂತಿಷ್ಟು ಸಮಯದಲ್ಲಿ ಈ ಕಾಮಗಾರಿ ಪೂರ್ತಿಯಾಗುತ್ತದೆ ಎಂದು ಹೇಳುವ ಮಾತನ್ನು ತಾವು ಹೇಳಬೇಕು. ಈ ನಿಮ್ಮ ಸರ್ಕಾರದ ಅವಧಿಯೊಳಗಾದರೂ ಪೂರ್ತಿಯಾದಿತೇ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸುತ್ತೀರಿ? ಎಷ್ಟು ಸಮಯ ಬೇಕು ಎನ್ನುವ ಖಚಿತವಾದ ಮಾಹಿತಿಯನ್ನು ತಾವು ನೀಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಮಾನ್ಯ ಜವಳಿ ಮತ್ತು ಯುವಜನ ಸೇವೆ ಸಚಿವರು): ಸಾಧ್ಯವಾದರೆ, ಇನ್ನೊಂದು ತಿಂಗಳಿನಲ್ಲಿ ಈ ಅನುದಾನವನ್ನು ನಾವು ಬಿಡುಗಡೆ ಮಾಡುತ್ತೇವೆ. ನಾವು ಕಾಮಗಾರಿಯ ಕೆಲಸವನ್ನು ಕೊಟ್ಟಿರುವಂಥ PRD ಏಜೆನ್ಸಿಯವರು ನವೆಂಬರ್ ತಿಂಗಳಿನಲ್ಲಿ ಕೆಲಸ ಮುಗಿಸುತ್ತೇವೆಂದು ಹೇಳಿದ್ದಾರೆ. ನವೆಂಬರ್ ಅಥವಾ ಡಿಸೆಂಬರ್‌ನಲ್ಲಿ almost complete ಆಗುವ chances ಇದೆ.

ಜೋಯಿಡಾ ತಾಲ್ಲೂಕನ್ನು ಗಡಿನಾಡು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿಸುವ ಬಗ್ಗೆ

40 (352) ಶ್ರೀ ಸುನಿಲ್ ವಿ. ಹೆಗಡೆ (ಹಳಿಯಾಳ್ ಕ್ಷೇತ್ರ)

ಶ್ರೀ ಗೋವಿಂದ ಎಂ. ಕಾರ ಜೋಳ (ಸಣ್ಣ ನೀರಾವರಿ, ಯೋಜನೆ ಮತ್ತು ಸಾಂಖ್ಯಿಕ ಸಚಿವರು)

ಅ) ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕನ್ನು ಗಡಿನಾಡು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಗಡಿನಾಡು ತಾಲ್ಲೂಕಿಗೆ ಸರ್ಕಾರ ಮೂಲಭೂತ ಸೌಕರ್ಯಗಳನ್ನು ಒದಗಿಸಿದೆಯೇ;